O.S.No.113/2014

PW-2

ಇಂದು ದಿನಾಂಕಃ08-09-2015 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಶ್ರೀ.ಎಂ.ಸಿ.ಬಿ. ವಕೀಲರಿಂದ.( 1 ರಿಂದ 3 ನೇ ಪ್ರತಿವಾದಿಪರ ವಕೀಲರು)

ದಾವಾ ಜಮೀನನ್ನು ನಾನು ನೋಡಿರುತ್ತೇನೆ. ಸತ್ಯಪ್ಪ ಮತ್ತು ಅವರ ಹೆಂಡತಿ ಇವರ ಕುಟುಂಬದ ನನಗೆ ಪರಿಚಯ ಇದೆ. ಸತ್ಯಪ್ಪ ಇವರು ಮೂಲತಃ ತೇರದಾಳದವರು ಎಂದರೆ ಸರಿ. ಸತ್ಯಪ್ಪ ಇವರಿಗೆ ಮದರಕಂಡಿಯಲ್ಲಿರುವ ಆಸ್ತಿ ಬಿಟ್ಟರೇ ಬೇರೆ ಗ್ರಾಮಗಳಲ್ಲಿರುವ ಜಮೀನು ಹೊಂದಿರುವ ಬಗ್ಗೆ ನನಗೆ ಗೊತ್ತಿಲ್ಲಾ. ಸತ್ಯಪ್ಪ ಹೊಂದಿದಂತಹ ಆಸ್ತಿಗಳು ಸ್ವಂತ ಗಳಿಸಿದ್ದಾಗಿರುತ್ತವೆ ಎಂದರೆ ಸರಿ. ಸತ್ಯಪ್ಪನಿಗೆ ಮೂರು ಜನ ಗಂಡು ಮಕ್ಕಳು ಎಂದರೆ ಸರಿ ಅವರುಗಳ ಹೆಸರುಗಳೆಂದರೆ ಮಹಾದೇವ, ಪರಪ್ಪ ಮತ್ತು ನಾಗಪ್ಪ ಅಂತಾ ಇರುತ್ತಾರೆ ಎಂದರೆ ಸರಿ. ದಾವಾ ಜಮೀನನ್ನು ಹುಲಗಣ್ಣನವರ ಮನೆತನಕ್ಕೆ ಸೇರಿದ್ದಾಗಿರುತ್ತದೆ ಎಂದರೆ ಸರಿ. ದಾವಾ ಜಮೀನಿನ ಸರ್ವೇ ನಂ.144 ಇರುತ್ತದೆ. ಇದು ಖುಷ್ಕಿ ಜಮೀನಾಗಿದೆ ಎಂದರೆ ಸರಿ ಪುನಃ ಸಾಕ್ಷಿಯುಅದು ಖುಷ್ಕಿ ಜಮೀನಾಗಿರುವುದಿಲ್ಲ ಅದು ನೀರಾವರಿಯಾಗಿರುತ್ತದೆ ಎಂದು ನುಡಿದಿರುತ್ತಾರೆ . ಸದರಿ ಜಮೀನಿಗೆ ಜೆಎಲ್ ಬಿ ಸಿ ಕೆನಾಲ್ ನಿಂದ ಮತ್ತು ಬೋರವೆಲ್ಲನಿಂದ ನೀರನ್ನು ಪಡೆಯುತ್ತಾರೆ. ಬೋರನ್ನು ಸುಮಾರು 10-12 ವರ್ಷಗಳಿಂದ ಮಹಾದೇವ ಹಾಕಿರುತ್ತಾರೆ. ಸದರಿ ಜಮೀನನ್ನು ಮಹಾದೇವ ಸಾಗುವಳಿ ಮಾಡುತ್ತಿದ್ದನು. ಜಮೀನನ್ನು ಮಹಾದೇವ ಮಾರಿರುವುದಿಲ್ಲ. ಆದರೆ ಅವರ ಮಗ ಜಮೀನನ್ನು ತನ್ನ ತಂದೆ ತೀರಿದ ಬಳಿಕ ಮಾರಾಟ ಮಾಡಿರುತ್ತಾರೆ. ದಾವಾ ಜಮೀನಿಗೆ ಕೆನಾಲ್ ಹಾಗೂ ಎರಡು ಬೋರವೆಲ್ ಗಳನ್ನು ಬಿಟ್ಟರೆ ಯಾವುದೇ ನೀರು ಇರುವುದಿಲ್ಲ. ದಾವಾ ಜಮೀನಿನಲ್ಲಿ ಬೋರವೆಲ್ ಗಳು ಇರುತ್ತವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. 1 ನೇ ವಾದಿಗೆ 25 ಗುಂಟೆ ಜಮೀನನ್ನು ಕೊಡಿಸುವ ಸಂಬಂಧವಾಗಿ ನಾನು ಹಿರಿತನ ಮಾಡಿರುತ್ತೇನೆ. 1 ನೇ ಪ್ರತಿವಾದಿ 1 ನೇ ವಾದಿಯನ್ನು ಸರಿಯಾಗಿ ನೋಡದಿದ್ದ ಕಾರಣ ಅವರಲ್ಲಿ ಜಗಳ ಬಂದಿದ್ದು ನಂತರ ಆಸ್ತಿ ಸಂಬಂಧವಾಗಿ 1 ನೇ ವಾದಿ ಮತ್ತು 1 ನೇ ಪ್ರತಿವಾದಿ ಇವರ ಮಧ್ಯ ಆಸ್ತಿ ಸಂಬಂಧ ಜಗಳ ಇತ್ತು. 1 ನೇ ವಾದಿಯು ಆಸ್ತಿಯಲ್ಲಿ ಪಾಲು ಮಾಡಬೇಕೆಂದು ಕೇಳಿದ್ದರ ಸಂಬಂಧವಾಗಿ ನಾನು ಮತ್ತು ಹಿರಿಯವರಾದ ಪರಪ್ಪ, ಸಂಗಪ್ಪ ಹಟ್ಟಿ ಮಾರುತಿ ಕಂಕನವಾಡಿ, ಮಹಾದೇವ ಪರಪ್ಪನವರ ಹಾಗೂ 5-6 ಜನರು ಹಿರಿತನವನ್ನು ಮಹಾದೇವ ಇವರ ಆಸ್ತಿಯಲ್ಲಿ ಪಾಲು ಕೊಡಿಸುವ ಸಂಬಂಧವಾಗಿ ಮಾಡಿರುತ್ತೇವೆ. ಪಾಲು ಮಾಡುವಾಗ ಮಹಾದೇವ ಇವರಿಗೆ ಮದರಕಂಡಿಯಲ್ಲಿರುವ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿ ಇದ್ದ ಬಗ್ಗೆ ಗೊತ್ತಿರುವುದಿಲ್ಲಾ. ಮಹಾದೇವ ಇವರ ಹೆಸರಿನಲ್ಲಿ ಆಸ್ತಿ ಇದ್ದ ಬಗ್ಗೆ ಮಾತ್ರ ವಿಚಾರ ಮಾಡಿರುತ್ತೇವೆ. ದಾವಾ ಆಸ್ತಿಯನ್ನು ಮಹಾದೇವ ಇವರ ಹೆಸರಿನಲ್ಲಿ ಇರಲಿಲ್ಲ ಸಾಕ್ಷಿಯು ಸ್ವ ಇಚ್ಛೆಯಿಂದ ಸದರಿ ಮಹಾದೇವ ತನ್ನ ಮಗ ಮತ್ತು ತನ್ನ ತಮ್ಮ ಹಾಗೂ ತನ್ನ ತಂಗಿಗೆ ಮಾಡಿದ ಬಗೆ ನಮಗೆ ಗೊತ್ತಿತ್ತು. ಆ ಬಗ್ಗೆ ನಾನು ಕಾಗದ ಪತ್ರವನ್ನು ನೋಡಿಲ್ಲ ಮತ್ತು ಯಾವಾಗ ಕಾಗದ ಪತ್ರ ಮಾಡಿದ್ದಾರೆಂದು ನಾನು ನೋಡಿರುವುದಿಲ್ಲಾ. ಆ ಬಗ್ಗೆ ನನಗೆ ಮಹಾದೇವ ಮತ್ತ ಸತ್ಯಪ್ಪ ಹೇಳಿದ್ದರು. ಮಹಾದೇವ ಬಲಾಢ್ಯಸ್ಥನಾಗಿದ್ದು ಆತನು ಕೇವಲ ಒಕ್ಕಲುತನ ಮಾಡುತ್ತಿದ್ದನು ಎಂದರೆ ಸಾಕ್ಷಿಯು ಆತನು ತಿರುಗಾಡುತ್ತಿದ್ದನು ಆದರೆ ಬಲಾಢ್ಯನಿರುವುದಿಲ್ಲ ಎಂದು ನುಡಿದಿರುತ್ತಾರೆ. ಮಹಾದೇವ ಇವನು ಪಕ್ಕದ ಜಮೀನಿನಲ್ಲಿ ಗುಡಿಸಲು ಹಾಕಲು ಹೋದಾಗ ಅಲ್ಲಿ ಪರಸಿ ಕಲ್ಲು ಆತನ ಕಾಲಿನ ಮೇಲೆ ಬಿದ್ದು ಆತನಿಗೆ ಗಾಯವಾಗಿ ನಂಜು ಆಗಿ ಆತನು ಗುಣಮುಖವಾಗದೇ ಆತನುತೀರಿಕೊಂಡಿರುತ್ತಾನೆಂದು ಸ್ವಇಚ್ಛೆಯಿಂದ ನುಡಿದಿರುತ್ತಾರೆ. ಮಹಾದೇವ ಇವನು ಒಳ್ಳೇಯ ಸ್ವಭಾವವುಳ್ಳವನಾಗಿದ್ದು ಆತನಿಗೆ ಅಡಿಕೆ ತಿನ್ನುವ ಚಟ ಇರಲಿಲ್ಲ ಎಂದರೆ ಸಾಕ್ಷಿಯು ಆತನಿಗೆ ಕುಡಿಯುವ ಚಟ ಇತ್ತು ಎಂದು ನುಡಿದಿರುತ್ತಾರೆ. ಆತನು ಕುಡಿಯುತ್ತಿದ್ದನು

ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಮಹಾದೇವ ಇವರ ಕುಟುಂಬದಲ್ಲಿ ಪಾಲು ಆದ ಬಗ್ಗೆ ನನಗೆ ಗೊತ್ತು. ಸದರಿ ಪಾಲನ್ನು ನಾನೇ ಮಾಡಿರುತ್ತೇನೆ. ಈ ಪಾಲಿನಲ್ಲಿ ಮಹಾದೇವನಿಗೆ ಸದರಿ ಜಮೀನನ್ನು ಕೊಟ್ಟಿದ್ದು ಪರಪ್ಪ ಹಾಗೂ ನಾಗಪ್ಪನಿಗೆ ಎರಡು ಎರಡು ಎಕರೆ ಜಮಿನನ್ನು ಕೊಟ್ಟಿರುತ್ತೇವೆ. ದಾವಾ ಜಮೀನು ಜವುಳ(ಸುಮಾರು) ಇದ್ದ ಕಾರಣ ಸದರಿ ದಾವಾ ಜಮೀನನ್ನು ಅಂದರೆ 3 ಎಕರೆ 20 ಗುಂಟೆಯನ್ನು ಆತನಿಗೆ ನೀಡಲಾಗಿತ್ತು. ಈ ಸಂಬಂಧ ವಾಟ್ನಿ ಪತ್ರ ಇರಬಹುದು . ದಾವಾ ಜಮೀನಿನಲ್ಲಿ ಸುಮಾರು 20 ಗುಂಟೆಯಷ್ಟು ಜಮೀನು ಜವುಳ ಇರುತ್ತದೆ. ಮಹಾದೇವ ಇವರ 1 ನೇ ಹೆಂಡತಿ ತೀರಿಕೊಂಡಿರುವುದು ನನಗೆ ತಿಳಿದಿರುತ್ತದೆ. 1 ನೇ ಹೆಂಡತಿ ತೀರಿದ ನಂತರ ಮಹಾದೇವನಿಗೆ 1 ನೇ ವಾದಿಯನ್ನು ಕೊಟ್ಟು ಮದುವೆಯನ್ನು ಮಾಡಲಾಗಿತ್ತು. 1 ನೇ ವಾದಿ 2 ನೇ ಹೆಂಡತಿಯಾಗಿದ್ದರಿಂದ 1 ನೇ ಹೆಂತಿಯ ಮಕ್ಕಳನ್ನು ಸರಿಯಾಗಿ ನೋಡುತ್ತಾಳೋ ಇಲ್ಲವೋ ಎಂದುದಾವಾ ಜಮೀನನ್ನು ಸದರಿಯವರಿಗೆ ಪಾಲು ಮಾಡಿ ಕೊಟ್ಟಿದ್ದರು ಎಂದರೆ ಸರಿ ಸಾಕ್ಷಿಯು ಸ್ವ ಇಚ್ಛೆಯಿಂದ ಮಹಾದೇವ ಕುಡಿಯುಎವ ಚಟಕ್ಕೆ ಒಳಗಾಗಿದ್ದರಿಂದ ಮಕ್ಕಳಿಗೆ ಜಮೀನು ಹಂಚಲಾಗಿತ್ತು ಎಂದು ನುಡಿದಿರುತ್ತಾರೆ. ಬಸಪ್ಪ ಮತ್ತು ದಾನಪ್ಪ ಇವರನ್ನು ಸತ್ಯಪ್ಪನ ಹೆಂಡತಿ ಸತ್ಯವ್ವ ಇವರು ಜೋಪಾನ ಮಾಡಿರುತ್ತಾಳೆ ಎಂದರೆ ಸರಿ. ಇಂದಿನವರೆಗೂ ಸತ್ಯವ್ವ 1 ನೇ ಪ್ರತಿವಾದಿಯವರ ಜೊತೆಯಲ್ಲಿದ್ದಾಳೆಂದರೆ ಸರಿ. ಸತ್ಯಪ್ಪನು ಬಸಪ್ಪನಿಗೆ ಪಾಲು ಮಾಡಿ ಕೊಟ್ಟಾಗ ಮಹಾದೇವ ಮತ್ತು ನಾಗಪ್ಪ ಪರಪ್ಪನಿಗೆ ಸಹ ಕೊಟ್ಟಿರುತ್ತಾರೆಂದರೆ ಸರಿ. ಮುಗಳಖೋಡ ಮತ್ತು ತೇರದಾಳದ ಜಮಿನು ಮಹಾದೇವನ ಪಾಲಿಗೆ ಬಂದಿತ್ತು ಎಂದರೆ ಸರಿ ಅಲ್ಲ. ಅದೇ ವೇಳೆಯಲ್ಲಿ ನಾಗಪ್ಪ ಹಾಗೂ ಪರಪ್ಪನ ಮಕ್ಕಳಿಗೂ ಪಾಲು ಮಾಡಿಕೊಟ್ಟಿದ್ದರು ಎಂದರೆ ಸರಿ ಅಲ್ಲ. ದಾವಾ ಜಮೀನಿನ ಎರಡು ಪಟ್ಟಿ ಬಿಟ್ಟು ನಾನು ಜಮೀನು ಖರಿದೀಸಿರುತ್ತೇನೆಂದರೆ ಸಾಕ್ಷಿಯು ನಾನು ಸ್ವಂತ ಗಳಿಕೆಯಿಂದ ಖರೀದಿಸಿರುತ್ತೇನೆಂದು ನುಡಿದಿರುತ್ತಾರೆ ದಾವಾ ಜಮೀನನ್ನು ನನಗೆ ಖರೀದಿಸುವ ಇಚ್ಛೆ ಇರುವುದರಿಂದ ಅವರು ಕೊಡದೇ ಇರುವುದರಿಂದ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ನಂತರ ಮಾರುಕಟ್ಟೆಯ ಬೆಲೆಗೆ 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿಯು ಹಿರಿಯರಾದ ನಮಗೆ ಆ ಬಗ್ಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಆ ಹೊಲಕ್ಕೆ 4 ನೇ ಪ್ರತಿವಾದಿ ಬಂದಾಗಲೇ ಅವರುಖರೀದಿ ಮಾಡಿದ ಬಗ್ಗೆ ತಿಳಿದಿರುತ್ತದೆ. ನಾನು ತಾಲೂಕಾ ಪಂಚಾಯತಿಯ ಸದಸ್ಯನಾಗಿರುತ್ತೇನೆ. ನನಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೇಟ ಕೊಡಬಾರದೆಂದು 4 ನೇ ಪ್ರತಿವಾದಿ ಹೇಳಿದ್ದಾರೆಂದರೆ ಸಾಕ್ಷಿಯು ಅದಕ್ಕೂ ಇದಕ್ಕೂ ಯಾವುದೇ ಸಂಬಂಧವಿಲ್ಲ ಎಂದು ನುಡಿದಿರುತ್ತಾರೆ. ಅವರೊಂದಿಗೆ ನನ್ನ ಸಂಬಂಧ ಸರಿಯಾಗಿ ಇರದ್ದರಿಂದ ಅವರ ವಿರುದ್ದ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಮಹಾದೇವನಿಗೆ ದಾವಾ ಆಸ್ತಿಯ ಸಂಬಂಧ ಇಲ್ಲ ಎಂದರೆ ಸರಿ ಅಲ್ಲ. ನಾನು ದಾವಾ ಆಸ್ತಿಯ ಪಾಲಿನ ಸಂಬಂಧವಾಗಿ ಎರಡು ಸಲ ಹಿರಿತನ ಮಾಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ.

ಮರುವಿಚಾರಣೆಃಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

ಜೆ ಎಂ ಎಫ್ ಸಿ ಜಮಖಂಡಿ.

ಸಾಕ್ಷಿಯ ಸಹಿ